135(2)

Regd No BG 155

— ಶ್ರೀ —

11—4—1962

Sri "SATYAVADI"
— DAILY —
MYSORE4
46 th Year

ಸತ್ಯವಾದಿ
SATYAVADI

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಆರಮನೆ ಸಿಂಸ್ಯೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

1967 ರ ವೇಳೆಗೆ ಭಾರತದಲ್ಲಿ ಅಪಾಯಕರ ಪರಿಸ್ಥಿತಿ ಆಗಬಹುದು

ಪಾಕ್ ದರೋಡೆಗಾರರಿಂದ ಲೂಟಿ

ಕದನ ವಿರಾಮ ಗೆರೆಯಲ್ಲಿ ಸರ್ಕಾರಿ ಆಸ್ಪತ್ರೆಯನ್ನು ಪಾಕಿಸ್ತಾನದ ದರೋಡೆಗಾರರ ಗುಂಪೊಂದು ಲೂಟಿ ಮಾಡಿ ಆಸ್ಪತ್ರೆ ಸಾಮಗ್ರಿಗಳನ್ನು ತೆಗೆದುಕೊಂಡು ಹೋದರೆಂದು ಜಮ್ಮು ವಾರ್ತೆ.

ಕಾಶ್ಮೀರ ಚರ್ಚೆ

ಈಗಿನ ಯೋಜನೆಯ ಪ್ರಕಾರ ಈ ತಿಂಗಳ 27 ರಂದು ವಿಶ್ವಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಚರ್ಚೆ ನಡೆಯುವುದು ಎಂದು ಪಾಕಿಸ್ತಾನದ ಪ್ರತಿನಿಧಿಗಳು ನಿನ್ನೆ ನ್ಯೂಯಾರ್ಕ್‌ನಲ್ಲಿ ತಿಳಿಸಿದರು.

ಪ್ರಮಾಣ ವಚನ

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಿನ್ನೆ ಬೆಳಿಗ್ಗೆ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರ ಸಮ್ಮುಖದಲ್ಲಿ 21 ಮಂತ್ರಿಗಳ ಪೈಕಿ 22 ಜನರು ಪ್ರಮಾಣ ವಚನ ಸ್ವೀಕರಿಸಿದರು. ತಮಗಿತ್ತ ಅಂತರ್ರಾಷ್ಟ್ರೀಯ ವ್ಯಾಪಾರದ ಖಾತೆಯನ್ನು ಒಪ್ಪಿದ ಶ್ರೀ ಮನುಭಾಯ್ ಪಾಟಾಂವರು ಅಧ್ಯಕ್ಷರಿಗೆ ಪತ್ರ ಬರೆದು, ಮಂತ್ರಿ ಪದವಿಯನ್ನು ಒಪ್ಪುವುದು ತಮಗೆ ಸಾಧ್ಯವಿಲ್ಲದಿರುವುದನ್ನು ತಿಳಿಸಿದ್ದರು ಪ್ರಮಾಣ ವಚನ ಅದನಂತರ ನೆಹರು ಮಂತ್ರಿಮಂಡಲದ ಸಭೆಯಲ್ಲಿ ಸಣ್ಣಧ್ವನಿಯಲ್ಲಿ ಮಾತನಾಡಿದರು.

ಸಿಗರೇಟಿನಿಂದ ತೆರಿಗೆ ಉತ್ಪತ್ತಿ

ಅಮೆರಿಕದ ಫೆಡರಲ್ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಕಳೆದ ವರ್ಷ ಸಿಗರೇಟು ಮೇಲೆ ವಿಧಿಸಿದ ತೆರಿಗೆಯಿಂದ 3100 ಮಿಲಿಯ ಡಾಲರುಗಳು ಉತ್ಪನ್ನವಾಗಿರುವುದಾಗಿ ವಾಷಿಂಗ್ಟನ್ ವಾರ್ತೆ ತಿಳಿಸಿತ್ತದೆ.

× ಬೂಧ್ಯಾನಾದ ಹೊಲಿಗೆ ಯಂತ್ರ ಮಿಷ್ಟಿಗೆ ಹೊಲಿಗೆ ಯಂತ್ರಗಳಿಗಾಗಿ ಫಾರ್ಮಿಸಿದ ಅರ್ಜಿಗಳು ಬಂದಿದೆ.

ಸರ್ವೋದಯ ನಾಯಕರಾದ ಶ್ರೀ ಜಯಪ್ರಕಾಶ ನಾರಾಯಣರು ಪಾಟ್ನಾದಲ್ಲಿ ಅಖಿಲ ಭಾರತ ಸರ್ವ ಸೇವಾ ಸಂಘದ ಮೂರು ದಿವಸಗಳ ಸಮ್ಮೇಳನವನ್ನುದ್ದೇಶಿಸಿ ಮೊನ್ನೆ ಭಾಷಣಮಾಡುತ್ತ 1967 ರ ವೇಳೆಗೆ, ಪ್ರಧಾನಿ ನೆಹರು ದೇಶದ ಮುಂದಾಳತ್ವವನ್ನು ವಹಿಸದಿರಬಹುದಾದಾಗ, ಅಪಾಯಕಾರಿ ಪರಿಸ್ಥಿತಿ ಉಂಟಾಗಬಹುದು ಎಂದು ತಿಳಿಸಿದರು. ಮಹಾತ್ಮ ಗಾಂಧಿಯವಂತೆ ಜನತೆಯ ನಾಯಕತ್ವವನ್ನು ವಹಿಸಿಕೊಳ್ಳಲು ಪಂ|| ನೆಹರು ಪ್ರಧಾನಿ ಪದವಿಯನ್ನು 1957 ಮತ್ತು 1962 ರ ಮಧ್ಯೆ ಬಿಟ್ಟುಬಿಡಬೇಕಾಗಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಶಾಸ್ತ್ರಿ ಉತ್ತರಾಧಿಕಾರಿಯನ್ನು ಸೇವಿಸಿಲು ಅವರಿಗೆ ಸುಲಭವಾಗಿತ್ತು ಎಂದರು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾದ ಬಲಗಳು ದೇಶದಲ್ಲಿ ಈಗಾಗಲೇ ತಲೆ ಎತ್ತಿವೆ, ಈ ಬಲಗಳ ವಿರುದ್ಧ ಪ್ರಧಾನಿಗಳು ತಡೆಯಲು ದೈಹಿಕವಾಗಿ ಶಕ್ತಿ ಇಲ್ಲದಿರಬಹುದಾದಾಗ 1967 ರ ವೇಳೆಗೆ ಅವು ಹಿಂಸಾತ್ಮಕವಾಗಬಹುದು. ಅಧಿಕಾರವನ್ನು ಸ್ವೀಕರಿಸಲು ಯಾವುದೇ ಸರ್ವಾಧಿಕಾರಿಗೆ ಅವಕಾಶ ಆಗಬಹುದು ಎಂದು ನುಡಿದರು. ಭಾರತದ ರಾಜಕೀಯದಿಂದ ನೆಹರು ಮರೆಯಾದನಂತರ ಎಲ್ಲಿಯ ವರೆಗೆ ಪ್ರಜಾಪ್ರಭುತ್ವ ಉಳಿದೀತು ಎಂಬುದು ಯಾರ ಊಹೆಗೂ ನಿಲುಕುವ ವಿಷಯ ಎಂದು ಅವರು ತಿಳಿಸಿದರು.

ಅಶ್ಲೀಲ ಆಫ್ ಟ್ರೀ

ಬೊಂಬಾಯಿನ ಸ್ಟೇಷನರಿ ವ್ಯಾಪಾರಿ ಗಾಂನೋರ್ವನು ಅಶ್ಲೀಲ ಆಫ್ ಟ್ರೀಯನ್ನು ಮಾರಿದ್ದಕ್ಕೆ ಪೆಸಿಡೆನ್ಸಿ ಮಾಜಿಸ್ಟ್ರೇಟರು ದಂಡಿಸಿದರು ಸದ್ಯಡತೆಯ ಒಂದು ವರ್ಷದ ಬಾಂಡಿನ ಮೇಲೆ ಆ ವ್ಯಾಪಾರಿಯು ಬಿಡುಗಡೆ ಆಯಿತು.

ಕೃಶ್ಚೇವ್‌ರಿಗೆ ಸೂಚನೆ

ಅಣು ಪ್ರಯೋಗದ ಅಂತರ್ರಾಷ್ಟ್ರೀಯ ನಿರ್ಬಂಧದ ಬಗ್ಗೆ ನಿಮ್ಮ ಮನಸ್ಸನ್ನು ಬದಲಾಯಿಸಿ ಮಾಡಿಕೊಳ್ಳದಿದ್ದರೆ ಈ ತಿಂಗಳಲ್ಲಿ ಪಶ್ಚಿಮ ರಾಷ್ಟ್ರಗಳ ಅಣು ಪ್ರಯೋಗ ಯೋಜನೆ ನಡೆಯುವುದೆಂದು ಅಧ್ಯಕ್ಷ ಕೆನೆಡಿ ಹಾಗೂ ಬ್ರಿಟೀಷ್ ಪ್ರಧಾನಿ ಮ್ಯಾಕ್ಮಿಲ್ಲನ್ ಪ್ರಧಾನಿ ಕೃಶ್ಚೇವರಿಗೆ ತಿಳಿಸಿರುವರೆಂದು ವಾಷಿಂಗ್ಟನ್ ವಾರ್ತೆ.

ಶ್ರೀ ರಾಮೋತ್ಸವ

ವೈಸೂರು ಕುಂಚಟಿಗರ ಸಂಘ ಶೇರಾಮ ನುಂದಿಂದಲ್ಲಿ ಈ ಮಾಹೆ 13 ನೆಯ ಶಾ|| ನಿಂದ 22 ರ ವರೆಗೆ ಶ್ರೀ ರಾಮೋತ್ಸವವು ನಡೆಯುವುದು 23 ರ ಸಂಜೆ 6 ಗಂಟೆಗೆ ವಸಂತೋತ್ಸವವು, 24 ರ ಸಂಜೆ 6 ಗಂಟೆಗೆ ಶ್ರೀ ಹನುಮಂತೋತ್ಸವವು ನಡೆಯುವುದು.

ಲೈಸನ್ಸು ಅರ್ಜಿಗಳು

ಆಮದು ವ್ಯಾಪಾರ ನಿಯಂತ್ರಣ ಸಂಸ್ಥೆ ಈ ವರ್ಷ ಮಾರ್ಚ್ 31 ಕ್ಕೆ ಅಂತ್ಯಗೊಂಡ ಅವಧಿಯಲ್ಲಿ ಆಮದು ಲೈಸನ್ಸುಗಳನ್ನು ಅಪೇಕ್ಷಿಸಿ ಬಂದ 209705 ಅರ್ಜಿಗಳನ್ನು ಸ್ವೀಕರಿಸಿದೆ.

೦೦೦

ಮೈಸೂರು ರಾಜ್ಯದಿಂದ 9 ಜುನಾವರೆಗಣ ತಕರಾರು ಅರ್ಜಿಗಳು ಬಂದಿವೆ.

★

ಈ ಮಾಹೆ 19 ರಿಂದ 10—12 ನಾರಗಳ ವರೆಗೆ ಮೈಸೂರು ರಾಜ್ಯಪಾಲರಿಗೆ ವಿದೇಶ ಪ್ರವಾಸಕ್ಕಾಗಿ ರಜಾಕೊಟ್ಟಿದೆ ಎಂದು ನಿನ್ನೆ ರಾಷ್ಟ್ರಪತಿ ಭವನದಲ್ಲಿ ಪ್ರಕಟಿಸಲಾಯಿತೆಂದು ನವದೆಹಲಿ ವಾರ್ತೆ ಅವಧಿಗೆ ಶ್ರೀ ಮಂಗಳದಾಸಪಕವಾಸರವರು ಮೈಸೂರಿನ ರಾಜ್ಯಪಾಲರಾಗಿರುವರು

ವಿವಿಧ ವಿಷಯಗಳು

ಕಾಂಗ್ರೆಸ್ಸು ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರು ಈ ಮಧ್ಯಾಹ್ನ ಹೈದರಾಬಾದಿಗೆ ತೆರಳಿದರು ಶ್ರೀ ನಿಜಲಿಂಗಪ್ಪನವರು ಗುಂಟಿನೊಡನೆ ಹಾಗೂ ಶ್ರೀ ಬಿ ಡಿ ಜತ್ತಿ ಮತ್ತು ಶ್ರೀ ಕಡಿದಾಳ ಮಂಜಪ್ಪನವರೊಡನೆ ಮಾತುಕತೆ ನಡೆಸಿದರು. ಮಂತ್ರಿಮಂಡಲ ವಿಸ್ತರಣೆ ಆಗುವ ಸಂಭವವಿಲ್ಲ ಹಾಗೇನಾದರೂ ಆದರೆ ಅದು ಅನಿರೀಕ್ಷಿತ ನಿಜಲಿಂಗಪ್ಪನವರು ನಾಯಕರಾಗುವವರಿಗೆ ಮಂತ್ರಿಮಂಡಲದ ಪ್ರಶ್ನೆ ಮುಂದಕ್ಕೆ ಹೋಗಬೇಕೆಂಬ ಅಭಿಪ್ರಾಯ ಬಲವಾಗಿದೆ.

★

ದೇವರಾಜ ಮೊಹಲ್ಲದ ಗುಜರಿ ವ್ಯಾಪಾರಿಗಳನ್ನು ಸ್ಥಳದಿಂದ ಹೊರಹಾಕುವ ಬಗ್ಗೆ ಉಂಟಾಗಿರುವ ಪರಿಸ್ಥಿತಿಯನ್ನು ಚರ್ಚಿಸಲು ಮೈಸೂರು ಪೌರಸಭೆ ಈ ಮಾಹೆ 17 ರ ಮಧ್ಯಾಹ್ನ 4 ಗಂಟೆಗೆ ಸಮಾವೇಶವಾಗುವದು.

★

ಸೈದಾಪೇಟೆ ಮತ್ತು ಗಿಂಡಿ ರೈಲ್ವೆ ನಿಲ್ದಾಣಗಳ ಮಧ್ಯೆ ವಿದ್ಯುತ್ ರೈಲಿನಿಂದ ಮೊನ್ನೆ ಮೂವತ್ತು ವರ್ಷದ ಅಪರಿಚಿತನೋರ್ವನು ಅದ್ಯಾರ ನದಿಗೆ ಬೀಳಲು ಗಾಯಗೊಂಡ ಅವನನ್ನು ಆಸ್ಪತ್ರೆಗೆ ಸೇರಿಸಲು ಅಲ್ಲಿ ಅವನು ಮರಣ ಹೊಂದಿದನು.

★

ಬೆಂಗಳೂರು ನಗರದ ಅಸಿಸ್ಟೆಂಟು ಸಬ್ ಇನ್‌ಸ್ಪೆಕ್ಟರೋರ್ವರು ನಿನ್ನೆ ದಿನ ಮಧ್ಯಾಹ್ನ ಅಕ್ರಮ ಸಂಭೋಗನೆ ಸ್ವೀಕರಿಸಿದ ಆರೋಪನೆ ಮೇಲೆ ಬಂಧಿಸಿದೆ.

ನಾಳೆಯ ಪಂಚಾಂಗ

ಅನಂತ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿರೋಮಣಿ
ಸಂಪತ್ಕುಮಾರ ಜೋಯಿಸರಿಂದ

12 ಅಷ್ಟಮಿ ಪುನರ್ವಸು

ಮುಖ್ಯ ಮಂತ್ರಿಗಳವರ ಭಾಷಣ

ರಾಜ್ಯದಲ್ಲಿ ಹೊಸ ಸರಕಾರ ಬಂದಿದೆ : ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ಸು ಸರಕಾರ ನಡೆಸುವುದು ತುಂಬಾ ಕಷ್ಟಕರವಾಗಿದೆ : ನನ್ನಷ್ಟು ಕಷ್ಟ ಯಾರಿಗೂ ಇಲ್ಲ : ನನಗೆ ಬಹಳ ಏಟುಗಳು ಬಿದ್ದಿವೆ : ಕಾಂಗ್ರೆಸ್ಸು ವರಿಷ್ಠರು ಗುಂಪಿನ ರಾಜಕಾರಣ ಬಿಟ್ಟುಬಿಡಿರೆಂದು ಹೇಳುತ್ತಾರೆ ; ಗುಂಪಿನ ರಾಜಕಾರಣ ಒಮ್ಮೆಲೇ ತೊಡೆದುಹಾಕಲು ಸಾಧ್ಯವಿಲ್ಲ ; ಗುಂಪಿನ ರಾಜಕಾರಣ ಬಿಡಲೇಬೇಕು, ಇಲ್ಲವಾದರೆ ಸರಕಾರ ಉಳಿಯಲು ಸಾಧ್ಯವಿಲ್ಲ. ಎಂದು ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಕಂತಿಯವರು ಬೆಳಗಾಂ ಜಿಲ್ಲಾ ಕಾಂಗ್ರೆಸ್ಸು ಕಮಿಟಿಯಲ್ಲಿ ಕಾಂಗ್ರೆಸ್ಸು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು. ಶ್ರೀ ಕಂತಿಯವರು ಮುಂದೆ ಮಾತನಾಡುತ್ತಾ, ತಮ್ಮ ಭಾಷಣದಲ್ಲಿ ಇಂದು ಕಾಂಗ್ರೆಸ್ಸು ಸರ್ಕಾರವು ಗುಂಪಿನ ಸರಕಾರವೆನಿಸಿಕೊಳ್ಳುವುದು : ಇಂದು ಗುಂಪಿನ ರಾಜಕಾರಣದಿಂದ ಒಬ್ಬ ನೊಬ್ಬರು ವೈರಿಗಳಂತೆ ಕಾಣಲಾಗುತ್ತಿದೆ. ಬೇರೆ ಯಾವುದೇ ಪಕ್ಷದ ಸರಕಾರ ಬಂದರೆ ಅವನ್ನು ವೈರಿಗಳಂತೆ ಕಾಣಬಹುದು, ಆದರೆ ನಮ್ಮದೇ ಸರಕಾರ ವೈರಿಗಳಂತೆ ಕಾಣುವುದನ್ನು ಬಿಟ್ಟುಬಿಡಬೇಕು ; ಇಲ್ಲದಿದ್ದರೆ ಕಾಂಗ್ರೆಸ್ಸು ಹಾಳಾಗಿಹೋಗುವುದು. ರಾಜಕೀಯದಿಂದ ನನಗೆ ಬಹಳ ತೊಂದರೆಯಾಗಿದೆ ; ಒಂದು ಸಮುದ್ರದಲ್ಲಿ ಇದ್ದ ವಿಷಾನ್ನ ವನ್ನು ಮತ್ತೊಂದು ಸಮುದ್ರದಲ್ಲಿ ಬಿಟ್ಟಂತಾಗಿದೆ ; ಸಭಾತಿ ಇದ್ದಾಗಿನ ಭಾವನೆಗೂ ಈಗಿನ ಭಾವನೆಗೂ ಸರಿಎನಿಸಲಾರದಾಗಿದೆ ; ನಾನು ಯಾರಿಗೂ ಕೆಟ್ಟದನ್ನು ಮಾಡಲಾರೆ ; ಆದರೆ ಈಗ ಕೆಲ ಜನರೊಡನೆ ವೈರತ್ವ ಕಟ್ಟಿಕೊಳ್ಳಬೇಕಾಗಿದೆ. ನನಗೆ ಒಮ್ಮೊಮ್ಮೆ ರಾಜೀನಾಮೆ ಕೊಡಬೇಕೆಂದು ಅನ್ನಿಸುತ್ತದೆ : ಆದರೆ ತೆಗೆದುಕೊಂಡ ಕೆಲಸವನ್ನು ಸೇವಾ ದೃಷ್ಟಿಯಿಂದ ಹಾಗೆಯೇ ಬಿಡಬಾರದೆಂದು ಮುಂದೆಹೋಗಲು ನಿರ್ಧರಿಸಿದ್ದೇನೆ ; ನಸ್ಕ ಧೋರಣೆಯನ್ನು ಎಂ ಎಲ್ ಎ ಮತ್ತು ಎಂ ಎಲ್ ಸಿ ಗಳು ಸಮದೃಷ್ಟಿಯಿಂದ ನೋಡಬೇಕು ; ಗುಂಪುಗಾರಿಕೆ ಒಮ್ಮೆಲೇ ತೊಡೆದುಹಾಕಲು ಸಾಧ್ಯವಿಲ್ಲ, ಅದನ್ನು ನಿಧಾನವಾಗಿ ತೊಡೆದುಹಾಕಬೇಕಾಗಿದೆ ; ಕಾಂಗ್ರೆಸಿಗರು ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡಿಕೊಳ್ಳಬೇಕು ; ಅಂದರೆ ಗುಂಪುಗಾರಿಕೆ ಸಾವಕಾಶವಾಗಿ ಹೋಗುತ್ತದೆ ; ಇಲ್ಲದಿದ್ದರೆ ಕಾಂಗ್ರೆಸ್ಸು ಹಾಳಾಗಿಹೋಗುವುದು : ನನ್ನ ದಾರಿಯಂತೆ ನಾನು ನಡೆಯುತ್ತಿದ್ದೆ ; ದಾರಿಯಲ್ಲಿ ಮುಳ್ಳುಕಲ್ಲುಗಳಿವೆ ; ಅವುಗಳಿಂದ ಸುಗಮವಾಗಿ ಹೋಗಬೇಕಾಗಿದೆ ; ಅದಕ್ಕಾಗಿ ನೀವೆಲ್ಲರೂ ನನಗೆ ಸಹಾಯ ಮಾಡಿರಿ ; ನಾನು ಗುಂಪಿನ ರಾಜಕಾರಣಕ್ಕೆ ಬಲಿಬೀಳಲಾರೆ ; ನನ್ನ ದಾರಿಯಂತೆ ನಾನು ನಡೆಯುತ್ತೇನೆ— ಎಂದು ಹೇಳಿದರು.

೦೦೦೦

ವಿಜಯನಗರ ಬಡವಿದ್ಯಾರ್ಥಿನಿಲಯದ ವಸತಿಗೃಹದ ಅಡಿಗಲ್ಲನ್ನಿಡುವ ಸಮಾರಂಭವು ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಕಂತಿಯವರ ಹಸ್ತದಿಂದ ನಡೆಯೇರಿತು : ಈ ಸಮಯದಲ್ಲಿ ಅವರು ಮಾತನಾಡುತ್ತಾ – ಈ ಕಟ್ಟಡಪೂರ್ತಿಗೊಳಿಸಲು ತಾವು ಎದಷ್ಟು ಸಹಾಯ ಪ್ರಯತ್ನಿಸುವುದಾಗಿಯೂ, ಎಲ್ಲರೂ ಇಂಥ ಪುಣ್ಯ ಕಾರ್ಯಕ್ಕೆ ಸಹಾಯ ಮಾಡಬೇಕೆಂದೂ ಕೇಳಿಕೊಂಡರು. (ಸಂದೇಶ)

SHAKTI SUDHA

A Superb Tonic

Help The 'Gorakshana'

Advertise in Gorakasha and help the pious cause

ವುಡ್‌ಲ್ಯಾಂಡ್ಸ್ ಮಹೋನ್ನತ 9 ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ– ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಆಮೋಘ 3 ನೇ ವಾರ

ಶಾರದ (ತಮಿಳು)

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್ ಸಾರಂಗಪಾಣಿ, ಎಂ ವಿ ರಾಜಮ್ಮ. ಸಂಧ್ಯ, ಮುತ್ತುಲಕ್ಷ್ಮಿ

[ದಿನವಹಿ 3 ಆಟಗಳು]

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Capsule Entry

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.